ಆ ಚಳಿಗಾಲದಲ್ಲಿ ಎಲ್ಲೆಲ್ಲೂ ಹಿಮದ ರಾಶಿ. ಪಟ್ಟಣದ ಆ ಚೌಕದಲ್ಲಿ ಮಕ್ಕಳು ಹಿಮಮನುಷ್ಯನನ್ನು ಮಾಡುತ್ತಿದ್ದರು. ಅದೊಂದು ವಿಸ್ತಾರವಾದ ಚೌಕ. ಅನೇಕ ಜನರು ಪ್ರತೀದಿನ ಆ ಚೌಕದ ಮೂಲಕ ಹಾದುಹೋಗುತ್ತಿದ್ದರು. ಸುತ್ತುಮುತ್ತಲಿನ ಕಚೇರಿಗಳ ತೆರೆದ ಕಿಟಿಕಿಗಳಿಂದ ಆ ಚೌಕವನ್ನು ಸದಾ ನೋಡಬಹುದಾಗಿತ್ತು. ಇವು ಯಾವುದರ ಗೋಡೆಯೇ ಇಲ್ಲದಂತೆ ಆ ಚೌಕ ಮಾತ್ರ ವಿಸ್ತಾರವಾಗಿ ಉದ್ದಗಲಕ್ಕೆ ಚಾಚಿಕೊಂಡಿತ್ತು. ಅದರ ನಡುಭಾಗದಲ್ಲಿ ಮಕ್ಕಳು ನಗುತ್ತಾ ಕೇಕೆಹಾಕುತ್ತಾ ಹಿಮದಲ್ಲಿ ತಮಾಷೆಯ ಆಕೃತಿಯೊಂದನ್ನು ಮಾಡುವುದರಲ್ಲಿ ಮಗ್ನರಾಗಿದ್ದರು.

ಆ ಮಕ್ಕಳು ಮೊದಲಿಗೆ ಹಿಮದಿಂದ ಒಂದು ದೊಡ್ಡ ಉಂಡೆಯನ್ನು ಕಟ್ಟಿದರು. ಅದು ಮನುಷ್ಯನ ದೇಹದ ಆಕಾರದ್ದು. ಆಮೇಲೆ ಹಿಮದ ಒಂದು ಸಣ್ಣ ಉಂಡೆಯನ್ನು ಕಟ್ಟಿದರು. ಅದು ಮನುಷ್ಯನ ಭುಜಗಳು. ಬಳಿಕ ಇನ್ನೂ ಚಿಕ್ಕದಾದ ಒಂದು ಹಿಮದ ಉಂಡೆಯನ್ನು ನಿರ್ಮಿಸಿದರು. ಅದು ತಲೆ. ಆಮೇಲೆ ಇದ್ದಲಿನ ಚಿಕ್ಕಚಿಕ್ಕ ಚೂರುಗಳನ್ನು ಆ ಆಕೃತಿಯ ಮೇಲ್ತುದಿಯಿಂದ ಕೆಳಗಿನವರೆಗೆ ನೀಟಾಗಿ ಜೋಡಿಸಿದರು. ಅವು ಆ ಹಿಮಮನುಷ್ಯನ ಬಟ್ಟೆಯ ಗುಂಡಿಗಳು. ಮತ್ತೆ ಒಂದು ಕ್ಯಾರೆಟ್ ನಿಂದ ಮೂಗನ್ನು ಜೋಡಿಸಿದರು. ಈಗ ಅದೊಂದು ಪರಿಪೂರ್ಣ ಹಿಮಮನುಷ್ಯ ಆಯಿತು. ಚಳಿಗಾಲದಲ್ಲಿ ಪ್ರತೀವರ್ಷ ದೇಶದಾದ್ಯಂತ ಸಾಮಾನ್ಯವಾಗಿ ಹಿಮದಿಂದ ಮಾಡುವ ಹಿಮಮನುಷ್ಯನ ಆಕೃತಿಯ ಹಾಗೆಯೇ ಮಕ್ಕಳು ಮಾಡಿದ ಈ ಹಿಮದ ಬೊಂಬೆ ಇತ್ತು.

ಈ ರೀತಿಯ ಹಿಮಮನುಷ್ಯನನ್ನು ಮಾಡಿದ್ದರಿಂದ ಆ ಮಕ್ಕಳಿಗೆ ಖುಷಿಯೋ ಖುಷಿ. ತಮ್ಮ ಕೆಲಸ ಯಶಸ್ವಿ ಆದುದಕ್ಕೆ ಅವರೆಲ್ಲ ಬಹಳ ಸಂತೋಷಪಟ್ಟರು.

ಆ ಚೌಕದ ಮೂಲಕ ಹಾದುಹೋಗುವ ದಾರಿಹೋಕರೆಲ್ಲ ಆ ಹಿಮಮನುಷ್ಯ ಆಕೃತಿಯನ್ನು ಕಂಡು ಮೆಚ್ಚುಗೆ ಸೂಸುತ್ತಾ ಮುಂದೆ ಸಾಗುತ್ತಿದ್ದರು. ಸುತ್ತುಮುತ್ತಲಿನ ಸರಕಾರಿ ಕಚೇರಿಗಳು ಏನೂ ಸಂಭವಿಸಿಲ್ಲ ಎನ್ನುವ ಹಾಗೆ ತಮ್ಮ ಪಾಡಿಗೆ ಕೆಲಸಗಳನ್ನು ಮಾಡುತ್ತಿದ್ದುವು.

ಆ ಮಕ್ಕಳ ತಂದೆಗಂತೂ ಬಹಳ ಸಂತೋಷ: 'ಮಕ್ಕಳು ಶುದ್ಧಗಾಳಿಯಲ್ಲಿ ಒಳ್ಳೆಯ ವ್ಯಾಯಾಮ ಪಡೆಯುತ್ತಾರೆ. ಅದರ ಪರಿಣಾಮವಾಗಿ ಅವರು ಕೆನ್ನೆ ಗುಲಾಬಿಬಣ್ಣಕ್ಕೆ ತಿರುಗುತ್ತದೆ; ಅವರು ಆರೋಗ್ಯಕರ ಜೀವನಶಕ್ತಿಯನ್ನು ಪಡೆಯುತ್ತಾರೆ' ಎನ್ನುವ ಹಿಗ್ಗು ಅವನದ್ದು.

ಸಂಜೆಯ ಹೊತ್ತು ಅವರೆಲ್ಲಾ ಮನೆಯಲ್ಲಿ ಇರುವಾಗ, ಯಾರೋ ಬಾಗಿಲು ಬಡಿದ ಶಬ್ದವಾಯಿತು. ಬಂದವನು ಆ ಚೌಕದಲ್ಲಿ ಗೂಡಂಗಡಿ ಇಟ್ಟುಕೊಂಡಿದ್ದ ಪತ್ರಿಕೆ ಮಾರುವವನು. ಅವನು ಒಳಗೆ ಬರುತ್ತಿರುವಾಗಲೇ ಆ ತಡಹೊತ್ತಿನಲ್ಲಿ ಮನೆಯವರಿಗೆ ತೊಂದರೆ ಕೊಟ್ಟುದಕ್ಕೆ ಕ್ಷಮೆ ಯಾಚಿಸಿದ. ಆದರೆ ಆ ಮಕ್ಕಳ ತಂದೆಯಲ್ಲಿ ಕೆಲವು ವಿಷಯ ತಿಳಿಸುವುದು ತನ್ನ ಕರ್ತವ್ಯ ಎಂದು ನಿರ್ಧರಿಸಿ ಆತ ಅಲ್ಲಿಗೆ ಬಂದಿದ್ದ. ಆ ಮಕ್ಕಳಾದರೋ ಇನ್ನೂ ಚಿಕ್ಕವರು ಎನ್ನುವುದು ಅವನಿಗೆ ಗೊತ್ತಿತ್ತು; ಆದರೆ ಅವರ ಒಳಿತಿಗಾಗಿಯೇ ಅವರ ಮೇಲೆ ಒಂದು ಕಣ್ಣು ಇಡುವುದು ತೀರಾ ಅವಶ್ಯ ಎನ್ನುವುದು ಅವನ ಭಾವನೆ ಆಗಿತ್ತು. ಆ ಮಕ್ಕಳ ಬಗೆಗಿನ ಕಾಳಜಿ ಅಲ್ಲದಿದ್ದರೆ ಆತ ಆ ವೇಳೆಯಲ್ಲಿ ಅವರ ಮನೆಗೆ ಬರುತ್ತಲೇ ಇರಲಿಲ್ಲ. ಅವನ ದೃಷ್ಟಿಯಲ್ಲಿ ಅವನ ಈ ಭೇಟಿಯು ಒಂದು ಶೈಕ್ಷಣಿಕ ಉದ್ದೇಶದ್ದು. ವಿಷಯ ಏನೆಂದರೆ, ಆ ಮಕ್ಕಳು ಹಿಮಮನುಷ್ಯನ ಮೂಗನ್ನು ಕ್ಯಾರೆಟ್ ನಿಂದ ಮಾಡಿದ್ದರು. ಅದು ಕೆಂಪುಬಣ್ಣದ ಮೂಗು ಆಗಿತ್ತು. ಈಗ ನೋಡಿದರೆ, ಪತ್ರಿಕೆ



ಅಂಗಡಿಯವನದ್ದು ಕೂಡಾ ಕೆಂಪುಮೂಗು!

'ತನ್ನ ಮೂಗು ಕೆಂಪು ಆದದ್ದು ಹಿಮಕಡಿತದಿಂದಲೇ ಹೊರತು, ಕುಡಿತದಿಂದ ಅಲ್ಲ. ತನ್ನ ಮೂಗಿನ ಬಣ್ಣವನ್ನು ಸಾರ್ವಜನಿಕವಾಗಿ ಪ್ರಸ್ತಾವಮಾಡುವ ಯಾವ ಕಾರಣವೂ ಇಲ್ಲ. ಈ ರೀತಿಯ ಪ್ರಸಂಗ ಇನ್ನು ಮುಂದೆ ಆಗದಂತೆ ತಂದೆಯಾದವನು ನೋಡಿಕೊಂಡರೆ ತಾನು ಬಹಳ ಕೃತಜ್ಞನಾಗಿರುತ್ತೇನೆ' ಎಂದು ಪತ್ರಿಕೆ ಅಂಗಡಿಯವನು ವಿನಯದಿಂದ ಕೇಳಿಕೊಂಡ. ಅವನ ಮನಸ್ಸಿನಲ್ಲಿ ಮಕ್ಕಳ ಆರೋಗ್ಯಕರ ಬೆಳವಣಿಗೆಯ ಬಗ್ಗೆ ಗಾಢ ಕಾಳಜಿ ಇತ್ತು.

ಪತ್ರಿಕೆ ಅಂಗಡಿಯವನ ಮಾತು ಕೇಳಿ ಮಕ್ಕಳ ತಂದೆಗೆ ಚಿಂತೆಯಾಯಿತು. ಹೌದು, ಮಕ್ಕಳು ಯಾರನ್ನೂ ಗೇಲಿಮಾಡಲು ಬಿಡಬಾರದು, ಕೆಂಪುಮೂಗಿನವರನ್ನು ಕೂಡಾ. ಆದರೆ ಆ ಮಕ್ಕಳು ಅದನ್ನು ಅರ್ಥಮಾಡಿಕೊಳ್ಳದಷ್ಟು ಎಳೆಯರಾಗಿದ್ದರು. ತಂದೆಯು ಮಕ್ಕಳನ್ನು ಕರೆದ: 'ಇವನನ್ನು ಮನಸ್ಸಿನಲ್ಲಿ ಇಟ್ಟುಕೊಂಡು ನೀವು ಮಾಡಿದ ಹಿಮಮನುಷ್ಯನಿಗೆ ಕೆಂಪುಮೂಗನ್ನು ಇಟ್ಟದ್ದು ನಿಜವೇ?' ಮಕ್ಕಳಿಗೆ ನಿಜವಾಗಿಯೂ ಆಶ್ಚರ್ಯವಾಯಿತು. ಆರಂಭದಲ್ಲಿ ಪ್ರಶ್ನೆ ಏನೆಂದೇ ಅವರಿಗೆ ಅರ್ಥವಾಗಲಿಲ್ಲ. ನಿಧಾನಕ್ಕೆ ಮನವರಿಕೆಯಾದಂತೆ ಅವರು ಹೇಳಿದರು: 'ಆ ರೀತಿಯ ಆಲೋಚನೆ ನಮ್ಮ ಮನಸ್ಸಿಗೆ ಹೊಳೆದೇ ಇರಲಿಲ್ಲ.'

ಹಾಗಿದ್ದರೂ ಸಣ್ಣ ಶಿಕ್ಷೆಯಾಗಿ, ಮಕ್ಕಳು ರಾತ್ರಿಯ ಊಟ ಮಾಡದೆ ಮಲಗಲು ತಂದೆ ಹೇಳಿದ.

ಪತ್ರಿಕೆ ಅಂಗಡಿಯವನು ಸಂತೃಪ್ತನಾಗಿ, ಮಕ್ಕಳ ತಂದೆಗೆ ಕೃತಜ್ಞತೆ ಹೇಳಿ ಹೊರಟ. ಅವನು ಹೊರಗೆ ಬಾಗಿಲ ಬಳಿ ಬಂದಾಗ ಸ್ಥಳೀಯ ಸಹಕಾರಿಸಂಘದ ಅಧ್ಯಕ್ಷನು ಅವನಿಗೆ ಮುಖಾಮುಖಿಯಾದ. ಸಹಕಾರಿಸಂಘದ ಅಧ್ಯಕ್ಷನಂತಹ ಗಣ್ಯವ್ಯಕ್ತಿ ತನ್ನ ಮನೆಗೆ ಬಂದುದನ್ನು ಕಂಡು ಮಕ್ಕಳ ತಂದೆ ಬಹಳ ಸಂಭ್ರಮಪಟ್ಟ.

ಮಕ್ಕಳನ್ನು ಕಾಣುತ್ತಲೇ ಆ ಅಧ್ಯಕ್ಷ ಅವರನ್ನು ಗದರಿಸಲು ಶುರುಮಾಡಿದ: 'ಓ, ಇವರೆಯೋ ಆ ಪೋರರು! ನೋಡು, ನೀನು ಇವರನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ಚಿಕ್ಕವರು, ಆದರೆ ಈಗಲೇ ಪುಂಡರು ಆಗಿದ್ದಾರೆ. ನಾನು ಇವತ್ತು ನನ್ನ ಕಚೇರಿಯ ಕಿಟಕಿಯಿಂದ ನೋಡಿದ್ದೇನು ಗೊತ್ತಾ? ಇವರು ಹಿಮಮನುಷ್ಯನನ್ನು ಮಾಡುತ್ತಿದ್ದರು.'

'ಓ, ಅದು ಅದರ ಮೂಗಿನ ಬಗ್ಗೆಯೋ?'

'ಮೂಗು? ನಿನ್ನ ತಲೆ! ಒಂದು ಕ್ಷಣ ಯೋಚಿಸು. ಅವರು ಮೊದಲು ಒಂದು ಹಿಮದ ಉಂಡೆ ಮಾಡಿದರು, ಆಮೇಲೆ ಇನ್ನೊಂದು, ಬಳಿಕ ಮತ್ತೊಂದು. ಮತ್ತೆ ಏನೆಂದು ತಿಳ್ಕೊಂಡಿದ್ದೀಯಾ? ಅವರು ಮೊದಲು ಒಂದು ಉಂಡೆಯನ್ನು ಇನ್ನೊಂದು ಉಂಡೆಯ ಮೇಲೆ ಇಟ್ಟರು; ಮತ್ತೆ ಮೂರನೆಯ ಉಂಡೆಯನ್ನು ಆ ಎರಡು ಉಂಡೆಗಳ ಮೇಲೆ ಇಟ್ಟರು. ಇದು ಯಾರನ್ನಾದರೂ ಕೆರಳಿಸುವುದಿಲ್ಲವೇ?'ಅವನು ಹೇಳುತ್ತಾ ಇರುವುದು ಏನೆಂದು ತಂದೆಗೆ ಅರ್ಥವಾಗಲಿಲ್ಲ. ಸಹಕಾರೀ ಸಂಘದ ಅಧ್ಯಕ್ಷ ಸಿಟ್ಟಿನಿಂದ ಮಾತು ಮುಂದುವರಿಸಿದ: 'ನಿನಗೆ ಗೊತ್ತಾಗುವುದಿಲ್ಲ! ಆದರೆ ಅವರ ಉದ್ದೇಶ ಏನು ಇತ್ತು ಎನ್ನುವುದು ಬಹಳ ಸ್ಪಷ್ಟವಾಗಿದೆ. ಆ ಹಿಮಮನುಷ್ಯನನ್ನು ಮಾಡುವ ಮೂಲಕ, ನಿನ್ನ ಮಕ್ಕಳು ಹೇಳಲು ಬಯಸಿದ್ದು ಇಷ್ಟು: 'ನಮ್ಮ ಸಹಕಾರಿ ಸಂಘದಲ್ಲಿ ಒಬ್ಬ ಕಳ್ಳನು ಇನ್ನೊಬ್ಬ ಕಳ್ಳನ ಮೇಲ್ಗಡೆ ಇರುತ್ತಾನೆ.' ಒಂದುವೇಳೆ ಈ ರೀತಿಯ ವಿಷಯವನ್ನು ಯಾರಾದರೂ ಪತ್ರಿಕೆಯಲ್ಲಿ ಬರೆದರೆ, ಅವರು ಅದಕ್ಕೆ ಸರಿಯಾದ ಪುರಾವೆಯನ್ನು ಒದಗಿಸಬೇಕಾಗುತ್ತದೆ. ಹಾಗಿರುವಾಗ ಇಂತಹ ವಿಷಯವನ್ನು ಪಟ್ಟಣದ ಚೌಕದಲ್ಲಿ ಸಾರ್ವಜನಿಕವಾಗಿ